# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ,

ಕೆ.ಆರ್.ಪುರ ವಿಭಾಗ, ಹಳೇ ಮದ್ರಸ್ ರಸ್ತೆ ಕೆ.ಆರ್.ಪುರ ಬೆಂಗಳೂರು-36

---

ಸಂ:ಬಿಬಿಎಂಪಿ/ಸ.ಕಾ.ಪಾ.ಅ/ಕೆ.ಆರ್.ಪುರ/ಉ.ವಿ/ಪಿ.ಆರ್/186/2023-24 ದಿನಾಂಕ: 18/12/2023

ರವರಿಗೆ,

I T I EDUCATION COMMITTEE
VIDYAMANDIR
DOORVANINAGAR,
BANGALORE-560036.

ವಿಷಯ: ಕೆ.ಆರ್.ಪುರ ಉಪ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ52,ಕೆ.ಆರ್.ಪುರ,ಬೆಂಗಳೂರು ನಲ್ಲಿರುವ I T I EDUCATION COMMITTEE, VIDYAMANDIR ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ಲೋಇ 59 ಬಿಇಡಿ 2019 ದಿನಾಂಕ: 07/05/2022.
2. ತಮ್ಮ ಪತ್ರದ ದಿನಾಂಕ: -12-2023.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೆ.ಆರ್.ಪುರ ಉಪ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ52, ಕೆ.ಆರ್.ಪುರ, ಬೆಂಗಳೂರು-560036 ನಲ್ಲಿರುವ I.T I EDUCATION COMMITTEE VIDYAMANDIR ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ಉಲ್ಲೇಖ (2) ರ ಪತ್ರದಲ್ಲಿ ಕೋರಿರುತ್ತೀರಿ.

ಉಲ್ಲೇಖ (1) ಸರ್ಕಾರಿ ಆದೇಶದಲ್ಲಿ ನಿರ್ದೇಶನ ನೀಡಿರುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೆ.ಆರ್.ಪುರ ಉಪ ವಿಭಾಗ ರವರು ಕಟ್ಟಡವನ್ನು ಪರಿಶೀಲಿಸಿ "Structurally Stable Certificate" ಅನ್ನು ನೀಡಲು ಆದೇಶಿಸಿರುವುದರಿಂದ ಹಾಗೂ ಉಲ್ಲೇಖ (1) ರ ಆದೇಶದ ನಿರ್ದೇಶನದಂತೆ ಈಗಾಗಲೇ ನಿರ್ಮಾಣಗೊಂಡು ಅಸ್ತಿತ್ವದಲ್ಲಿರುವಂತಹ ಕಟ್ಟಡಗಳಿಗೆ ರಚನಾತ್ಮಕ (M/s KARNATAKA TEST HOUSE Pvt .Ltd ) Construction planning and Engineering ಮೌಲ್ಯಮಾಪನ ಮಾಡಿಸಿ National Building Code ಮಾನದಂಡಗಳ ಅನ್ವಯ ಪ್ರಮಾಣ ಪತ್ರ ನೀಡಲು ಸೂಚಿಸುವುದರಿಂದ ಪ್ರಸ್ತಾಪಿತ ಕಟ್ಟಡದ ಸ್ಟ್ರಕ್ಚರಲ್ ಪರೀಕ್ಷೆಗಳನ್ನು ನಡೆಸಿರುವ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದೆ

ಸದರಿ ಕಟ್ಟಡವು 2001-02ನೇ ವರ್ಷದಲ್ಲಿ ನಿರ್ಮಾಣಗೊಂಡಿರುವುದರಿಂದ ಉಲ್ಲೇಖ (1) ರ ಸರ್ಕಾರಿ ಸುತ್ತೋಲೆಯಲ್ಲಿ ಕಂಡಿಕೆ (4) ಉಪ-ಕಂಡಿಕೆ (1) ರಲ್ಲಿ ನೀಡಿರುವ ನಿರ್ದೇಶನದಂತೆ ಕನಿಷ್ಠ 2 ರೀತಿಯ Non-Destructive Test ಗಳನ್ನು ಕೈಗೊಳ್ಳಲು ಸೂಚಿಸಿರುವ ಮೇರೆ ಉಲ್ಲೇಖ (1) ರ ಸರ್ಕಾರಿ ಸುತ್ತೋಲೆಯಲ್ಲಿ ಕಂಡಿಕೆ (4) ಉಪ-ಕಂಡಿಕೆ (5) ರಲ್ಲಿ ವಿವರಿಸುವಂತೆ NABL Accredited Lab/ ISO Certified(ಈಶೋ 17025:2017 Certified) M/s KARNATAKA TEST HOUSE Pvt.Ltd. ರವರ ಮುಖಾಂತರ ಪರೀಕ್ಷೆಗಳನ್ನು ಕೈಗೊಂಡಿರುವ ಪರೀಕ್ಷೆ ವರದಿಯ ಪ್ರತಿಯೊಂದು ಸಲ್ಲಿಸಿದ್ದು, ಸಿಟಿ ಮುನ್ಸಿಪಾಲ್ ಬೋರ್ಡ್ ಬೆಂಗಳೂರು ರವರಿಂದ ಅನುಮೋದಿತ ನಕ್ಷೆಗನುಗುಣವಾಗಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ. ಸದರಿ ಕಟ್ಟಡವು GF(Ground floor) ಮತ್ತು FF(First Floor) ಗಳನ್ನು ಒಳಗೊಂಡಿದ್ದು 2001-02 ನೇ ಸಾಲಿನಲ್ಲಿ ನಿರ್ಮಿಸಲಾಗಿರುತ್ತದೆ. ಸದರಿ ಕಟ್ಟಡಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಹಾಗೂ ಸ್ಥಳ ತಪಾಸಣಾ ಸಮಯದಲ್ಲಿ ಕಟ್ಟಡದ ಹೊರಭಾಗ ಮತ್ತು ಶೌಚಾಲಯಗಳು, ಮೆಟ್ಟಿಲುಗಳು, ಅಗ್ನಿಶಾಮಕ ಸುರಕ್ಷತಾ ಕ್ರಮಗಳು, ಮಳೆ ನೀರು ಕೊಯ್ಲು ಕಾಮಗಾರಿಗಳು ಹಾಗೂ ಇನ್ನಿತರೆ ಎಲ್ಲಾ ಅಂಶಗಳನ್ನು ಗಮನಿಸಿದ್ದು ತೃಪ್ತಿಕರವಾಗಿರುವ ಬಗ್ಗೆ ವಾರ್ಡ್ ಸಂಖ್ಯೆ 52 ಅಭಿಯಂತರರು ವರದಿಸಿರುತ್ತಾರೆ.

ಮುಂದುವರೆದು ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಟ್ರಸ್ಟ್ ರವರು ಕಟ್ಟಡದ ಕಾಂಕ್ರೀಟ್ ಸದೃಢತೆಯ ಬಗ್ಗೆ 23-11-2023 ರಂದು ಕಟ್ಟಡದ ಮಾಲೀಕರು, M/s KARNATAKA TEST HOUSE Pvt.Ltd ರವರ ಮುಖಾಂತರ ಪರೀಕ್ಷೆಗಳನ್ನು ಕೈಗೊಂಡಿರುವ ಪರೀಕ್ಷಾ ವರದಿ ಪ್ರತಿಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ. ಸದರಿ ನಡೆಸಲಾದ ಪರೀಕ್ಷೆಯ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡು ಬಂದಿರುತ್ತದೆ.

ಉಲ್ಲೇಖ (1)ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಕಟ್ಟಡ ಸುರಕ್ಷಣೆ ಪ್ರಮಾಣ ಪತ್ರವನ್ನು ವಿತರಿಸಲು ಮೊತ್ತ ರೂ.5000/-(ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು I T I EDUCATION COMMITTEE VIDYAMANDIR ,ರವರು State Bank of India, ಡಿ.ಡಿ. ಸಂಖ್ಯೆ 322446 ಅನ್ನು ಆಯುಕ್ತರು ಬಿಬಿಎಂಪಿ ರವರ ಹೆಸರಿನಲ್ಲಿ ದಿನಾಂಕ: 11/12/2023 ರಂದು ಪಾವತಿಸಿರುತ್ತಾರೆ.

- I T I EDUCATION COMMITTEE VIDYAMANDIR, ದೂರವಾಣಿ ನಗರ, ಕೆ.ಆರ್. ಪುರ ಬೆಂಗಳೂರು-560036. ರಲ್ಲಿ ನಿರ್ಮಿಸಲಾಗಿರುತ್ತದೆ ಎಂದು ಟ್ರಸ್ಟ್ ಸಂಸ್ಥೆಯವರು ಮನವಿ ಪತ್ರ ಬರುತ್ತಾರೆ.
- ಸಿಟಿ ಮುನ್ಸಿಪಾಲ್ ಬೋರ್ಡ್ ಬೆಂಗಳೂರು ಬೆಂಗಳೂರು-560049 ರವರಿಂದ ಅನುಮೋದಿತ ನಕ್ಷೆಗನುಗುಣವಾಗಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, M/s KARNATAKA TEST HOUSE Pvt.Ltd ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪರೀಕ್ಷಾ ವರದಿಯನ್ನು ಪರಿಗಣಿಸಿ ಹಾಗೂ ವಾರ್ಡ್ ಅಭಿಯಂತರರು ನೀಡಿರುವ ವರದಿಯನ್ವಯ ವಾರ್ಡ್ ಸಂಖ್ಯೆ.52 ದೂರವಾಣಿ ನಗರ, ಕೆ.ಆರ್.ಪುರ, ಬೆಂಗಳೂರು-560036 ನಲ್ಲಿರುವ I T I EDUCATION COMMITTEE VIDYAMANDIR, ಕಟ್ಟಡವು ಪ್ರಸಕ್ತ ಶೈಕ್ಷಣಿಕ ಸಾಲಿಗೆ Structurally Stable ಇದೆ ಎಂದು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ಉಳಿದಂತೆ, ಪ್ರಸ್ತಾಪಿತ ಕಟ್ಟಡದ Non-Structural Elements (Infrastructural facilities) ಗೆ ಸಂಬಂಧಿಸಿದಂತೆ, ಸಿವಿಲ್ ಇಂಜಿನಿಯರ್, ಆರೋಗ್ಯಾಧಿಕಾರಿ, ಕಂದಾಯ ಅಧಿಕಾರಿ, ಅಗ್ನಿಶಾಮಕ ಅಧಿಕಾರಿ, ಸ್ಥಳೀಯ ಸಂಸ್ಥೆಯ ಅಧಿಕಾರಿಗಳನೊಳಗೊಂಡ ಪರೀಕ್ಷಾ ತಂಡದವತಿಯಿಂದ ಪರಿಶಿಲಿಸಿ, ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ "Fire Safety Certificate" ಅನ್ನು ಮುಖ್ಯ ಅಗ್ನಿಶಾಮಕ ಅಧಿಕಾರಿಯಿಂದ ಪಡೆಯತಕ್ಕದ್ದು.

ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೆ.ಆರ್.ಪುರ ಉಪ ವಿಭಾಗ.
ಬಿ.ಬಿ.ಎಂ.ಪಿ, ಬೆಂಗಳೂರು-36